# ಗೋಡೆ ಮೇಲಿನ ಬರಹ!

ಮಕ್ಕಳ ಚಿತ್ರ ಅಸಂಬದ್ಧವೆನಿಸಿದರೂ, ನಿಮ್ಮ ಗೋಡೆ ಕೊಳಕಾದರೂ ಪರವಾಗಿಲ್ಲ; 'ಇದೇನು ಬರೀ ಗೀಚಿದ್ದೀಯ' ಎಂದು ಅವಹೇಳನ ಮಾಡಬೇಡಿ. ಮಕ್ಕಳ ಪ್ರಯತ್ನವನ್ನು ಪ್ರಶಂಸಿಸಿ.

**ಸೌಮ್ಯ ಬೀನಾ**

'ಅದೇನ್ ಕೆಟ್ಟು ಬುದ್ಧಿ ಬಂದಿದ್ಯೇನೋ ನಮ್ಮನೆ ಪಾಪು ಗೆ, ಎಷ್ಟು ಬೈದ್ರೂ ಕಡೆಗೆ ಕದ್ದು ಮುಚ್ಚಿ ಆದ್ರೂ ಗೋಡೆ ಮೇಲೆ ಗೀಚಿ ಬರ್ತಾನೆ. ನೋಡಿ, ಗೋಡೆ ತುಂಬಾ ಬಣ್ಣ ಬಣ್ಣದ ಪೆನ್ಸಿಲ್ ತಗೊಂಡು ಎಷ್ಟ್ ಅಸಹ್ಯ ಮಾಡಿದಾನೆ, ಯಾರಾದ್ರೂ ಬಂದ್ರೆ, ನಮ್ಮನೆ ನೋಡ್ಬಿಟ್ಟು, ಎಷ್ಟು ಗಲೀಜು ಅಂದ್ಕೊಂಡಾರು..' ಎನ್ನುತ್ತಾ ಏಂಥ್ವಾ ಮಗುಗೆ ಬೈಕೋತಾ ಇದ್ರೆ, ಮಗು ತಾನು ಖುಷಿ ಪಟ್ಟು ಬರೆದ ಚಿತ್ರದಲ್ಲಿರುವ ಕಥೆಗೆ ಯಾಕಿವರೆಲ್ಲ ಬೈತಾರೆ ಅಂತ ಪಿಳಿ ಪಿಳಿ ಕಣ್ಣು ಬಿಟ್ಟುಕೊಂಡು ನೋಡುತ್ತಿತ್ತು. ತನ್ನ ಕುರಿತಾದ ಬೈಗುಳವನ್ನ ಕೇಳಿ ಏನು ಮಾಡಬೇಕೆಂದು ತಿಳಿಯದೆ ತಲೆ ತಗ್ಗಿಸಿ ನಿಂತಿತ್ತು.

ಮಕ್ಕಳಿರುವ ಮನೆಗಳಲ್ಲಿ ಈ ರೀತಿಯ ಗೋಡೆ ಬರಹ ಸರ್ವೇ ಸಾಮಾನ್ಯ. ಕೆಲವು ಮನೆಯ ಎದುರು ಗೋಡೆಯಲ್ಲೇ ಮಕ್ಕಳು ಗೀಚಿ ಬರೆದ ಬ್ರಹ್ಮಾಂಡವಿದ್ದರೆ, ಕೆಲವು ಮನೆಯ ಒಳಕೋಣೆಯ ಮೂಲೆಗೋಡೆ ಇನ್ಯಾವುದೋ ಕಥೆ ಸಾರುತ್ತಿರುತ್ತದೆ. ನಿಮ್ಮ ಮನೆಯಲ್ಲೂ ಈ ರೀತಿ ಗೋಡೆ, ನೆಲದ ಮೇಲೆ ಗೀಚುವ ಅಭ್ಯಾಸದ ಮಕ್ಕಳಿದ್ದರೆ, ಅಥವಾ ನಿಮ್ಮ ಮಕ್ಕಳು ಸುಮ್ಮನೆ ಗೊತ್ತು ಗುರಿ ಇಲ್ಲದೆ ಗೀಚುತ್ತ ಕೂರುತ್ತಾರೆ ಎಂದರೆ ಅವರಿಗದನ್ನು ಕೆಟ್ಟದ್ದೆಂದು ತಡೆಯುವ, ತೆಗಳುವ ಮುನ್ನ ಗೀಚುವಿಕೆಯ ಕುರಿತಾಗಿ ಹೀಗೊಂದಿಷ್ಟು ವಿಷಯಗಳನ್ನು ತಿಳಿದುಕೊಳ್ಳಿ.

ಗೋಡೆ ಒಂದು ಬಿಳಿ ಹಾಳೆಯಂತೆ.

ಮಕ್ಕಳು ಹುಟ್ಟಿನಿಂದಲೂ ಅನ್ವೇಷಕರು. ಅವರಿಗೆ ಪ್ರತಿಯೊಂದು ವಸ್ತುವನ್ನೂ ಶೋಧಿಸುವ ಕುತೂಹಲವಿರುತ್ತದೆ. ಮನೆಯ ಗೋಡೆ ಎಂಬುದು ಒಂದು ಗೃಹಾಲಂಕಾರದ ಮೂಲಭೂತ ವಸ್ತು ಎಂಬ ವಾಸ್ತವಿಕತೆ ತಿಳಿದಿರುವುದು ನಾವು ಹಿರಿಯರಿಗೆ ಮಾತ್ರ. ಮಕ್ಕಳ ಮಟ್ಟಿಗೆ ಗೋಡೆ ಎಂಬುದು ಒಂದು ಬಿಳಿಹಾಳೆ ಇದ್ದಂತೆ. ಸಹಜವಾಗಿಯೇ ಮನೆಯ ಗೋಡೆಗಳು ಅವರ ಪುಟ್ಟ ಕಣ್ಣಿಗೆ ವಿಶಾಲವಾದ ಜಾಗವೆನಿಸುವುದರಿಂದ ಮತ್ತು ಪೆನ್ಸಿಲ್ ಸ್ಕೆಚ್ ಪೆನ್‌ಗಳ ಬಣ್ಣ, ಗೋಡೆಯ ಮೇಲ್ಮೈ ರಚನೆಗೆ ಹೊಂದಿಕೊಂಡು ಕಲೆ ಕುರುಹುಗಳು ಮೂಡುವುದರಿಂದ ಮಕ್ಕಳಿಗೆ ಗೋಡೆಬರಹ ಅತ್ಯಂತ ಆಪ್ತವೆನಿಸುತ್ತದೆ.

ನಮಗೆ ನಮ್ಮ ಮಕ್ಕಳು ಶಾಲೆಗೆ ಹೋಗಲಾರಂಭಿಸಿದಾಗ, ಅವರ ಪಾಠ, ಅಕ್ಷರಾಭ್ಯಾಸ, ಹೋಮ್‌ವರ್ಕ್ ಬಗ್ಗೆ ನಾವು ಎಷ್ಟೊಂದು ಆಸಕ್ತಿ ವಹಿಸುತ್ತೇವೆ! ಅಕ್ಷರಗಳು ಸುಂದರವಾಗಿರಲಿ ಎಂದು ಬಯಸಿ ಅಭ್ಯಾಸ ಮಾಡಿಸುವ ಪ್ರಯತ್ನ ಮಾಡುತ್ತೇವೆ. ಆದರೆ ಇದೇ ಕಲಿಕೆ ಮಕ್ಕಳು ತಮ್ಮ ಅತ್ಯಂತ ಚಿಕ್ಕವಯಸ್ಸಿನಲ್ಲಿಯೇ ಪ್ರಾರಂಭಿಸಿರುತ್ತಾರೆ ಎಂಬುದು ನಮ್ಮ ಗಮನಕ್ಕೆ ದಕ್ಕಿರುವುದಿಲ್ಲ. ಮಾತನಾಡುವ ಕಲಿಕೆಯಲ್ಲಿ ಧ್ವನಿ ಹೊರಡಿಸುವಂತೆಯೇ, ಗೀಚುವುದು ಕೂಡ ಮಗು ತನ್ನನ್ನು ತಾನೇ ವ್ಯಕ್ತಪಡಿಸುವ ಒಂದು ಮಾಧ್ಯಮ. ಅದು ಮಕ್ಕಳಿಗೆ ಸಹಜವಾಗಿ ಬರುವ ಕೌಶಲ್ಯ. ಪೆನ್ಸಿಲ್ ಒಂದನ್ನು ಹಿಡಿದು ಗೀಚುವ ಮಗುವಿನ ಕೈಯ ನಿಯಂತ್ರಣ ಕೂಡ ಒಂದು ಅತೀ ಮುಖ್ಯವಾದ ಬೆಳವಣಿಗೆ.

ಗೀಚುವುದು ಬರವಣಿಗೆಯ ಒಂದು ಪ್ರಾರಂಭಿಕ ಹಂತವಷ್ಟೇ. ವಯಸ್ಸಿಗೆ ಅನುಗುಣವಾಗಿ ಮಕ್ಕಳಲ್ಲಿ ತಮ್ಮ ಕೈಬರಹದ ಮೇಲೆ ಕಂಟ್ರೋಲ್ ಬರಲಾರಂಭಿಸುತ್ತದೆ. ಗೀಚುವುದರಲ್ಲೂ ಹಂತಗಳಿವೆ. 2 ವರ್ಷದ ಆಸುಪಾಸಿನ ಮಕ್ಕಳು ಪೈಂಟ್ ಬ್ರಷ್ ಅಥವಾ ಬಣ್ಣದ ಪೆನ್ಸಿಲ್‌ಗಳಿಂದ ಕೇವಲ ಕಲೆಯನ್ನು ಮೂಡಿಸುವ ಪ್ರಯತ್ನದಲ್ಲಿರುತ್ತಾರೆ. ಸಮರ್ಪಕವಾಗಿ ಪೆನ್ನನ್ನು ಹಿಡಿಯಲು ಬಾರದಿದ್ದರೂ, ಅದರಿಂದ ಮೂಡುವ ಗುರುತಿನ ಆಕರ್ಷಣೆಗೆ, ತಮ್ಮ ಕೈ ಬೆರಳುಗಳ ಸಂಯೋಜಿಸಿ ಏನನ್ನಾದರೂ ಗೀಚುವ ಪ್ರಯತ್ನಪಡುತ್ತಾರೆ. ಗೊತ್ತು ಗುರಿಯಿಲ್ಲದ ಚುರುಕಾಗಿ ಗೀಚಿ ಮೂಡಿಸುವ ಇಂತಹ ಕಲೆಗಳಿಗೆ ಏನೂ ಅರ್ಥವಿರದಿದ್ದರೂ, ಮಕ್ಕಳ ಮಟ್ಟಿಗೆ ಹೊಸತೊಂದು ಕಂಡು ಹಿಡಿದ ಅಚ್ಚರಿ ಮತ್ತು ಖುಷಿ ಇರುತ್ತದೆ.

ಮಕ್ಕಳು 3 ವರ್ಷದ ಅವಧಿಯಷ್ಟರಲ್ಲಿ ಕೈಯಿಂದ ಬಣ್ಣದ ಸಾಧಕವನ್ನು ಹೇಗೆ ಹಿಡಿದುಕೊಂಡರೆ ಚಿತ್ರ ಮೂಡುತ್ತದೆ ಎಂದು ಸತತವಾಗಿ ಪ್ರಯತ್ನಿಸುತ್ತಿರುತ್ತಾರೆ. ಆಟದ ಸಮಯದಲ್ಲಿ ಕಲ್ಲು ಅಥವಾ ಕೋಲಿನಿಂದ ಮಣ್ಣ ಮೇಲೆ ಗೀರಿ ಮೂಡಿಸುವ ಚಿತ್ರ, ಚೆಲ್ಲಿದ ನೀರಿನ ಹನಿಗಳನ್ನು ಕೈಯಲ್ಲಿ ಎಳೆದು ಮೂಡಿಸುವ ಗೀರು, ಕಡೆಗೆ ಕೈಗೆ ಕೊಟ್ಟ ಪಪ್ಪಾಯ ಹೋಳಿನಿಂದ ತಟ್ಟೆಯ ಮೇಲೆ ಗೀರಿ ಏನು ಮೂಡುತ್ತದೆ ಎಂದು ನೋಡುವ ಕುತೂಹಲ ಕೂಡ ಇದಕ್ಕೆ ಹೊರತಲ್ಲ. ಹೀಗೆ ಮಕ್ಕಳು, ಯಾವ ರೀತಿಯಲ್ಲಿ ಕೈಯನ್ನಾಡಿಸಿದರೆ ಯಾವ ರೀತಿಯ ಗೀರು ಬರುತ್ತದೆ ಎಂದೆಲ್ಲ ಕ್ರಮೇಣ ಕರಗತ ಮಾಡಿಕೊಳ್ಳಲು ಆರಂಭಿಸುತ್ತಾರೆ. ಈ ವಯಸ್ಸಿಗೆ, ತನ್ನ ಕೈಗಳ ಸ್ನಾಯು ಹಿಡಿತ ಮತ್ತು ಕಣ್ಣಿನೊಂದಿಗಿನ ಕೈಯ ಹೊಂದಾಣಿಕೆ ಮಗುವಿನಲ್ಲಿ ಸ್ಪಷ್ಟವಾಗುತ್ತ ಹೋಗುತ್ತದೆ. ಇಂತದ್ದೇ ಚಿತ್ರ ಬರೆಯಬೇಕೆಂಬ ಯೋಚನೆಯಲ್ಲದಿದ್ದರೂ, ತಾವು ಗೀಚಿ ತಿದ್ದಿ ಬಿಡಿಸಿದ ಆಕೃತಿಯಲ್ಲಿ ಆಕಸ್ಮಿಕವಾಗಿ ಮೂಡಿದ ವರ್ತುಲ, ತ್ರಿಕೋನ ಆಕೃತಿಯನ್ನು ಗುರುತು ಹಿಡಿದು ನಮ್ಮನ್ನು ಕರೆದು ತೋರಿಸುವಷ್ಟರ ಮಟ್ಟಿಗೆ ನಮ್ಮ ಮಕ್ಕಳು ತಯಾರಾಗುತ್ತಾರೆ.

ಸುಮಾರು 4 ವರ್ಷದ ವಯಸ್ಸಿಗೆ, ಮಕ್ಕಳಿಗೆ ಅವರ ಗೀಚುವಿಕೆಯಲ್ಲಿ ಇನ್ನಷ್ಟು ನಿಯಂತ್ರಣ ದೊರಕಿರುತ್ತದೆ. ಆಕೃತಿಗಳು ಹೆಚ್ಚೆಚ್ಚು ಖಚಿತವಾಗಿ ಬರೆಯಲು ಆರಂಭಿಸುತ್ತಾರೆ. ಗೋಳಾಕೃತಿಗೆ ಕೈಯನ್ನು ಹೇಗೆ ತಿರುಗಿಸಬೇಕು ಎನ್ನುವಷ್ಟು ಅಂದಾಜು ಮಗುವಿಗೆ ಸಿಗುತ್ತದೆ. ತಾವು ಬರೆದ ಚಿತ್ರಕ್ಕೆ ಅವುಗಳೇನು ಎಂದು ಹೆಸರಿಸುತ್ತ ಬರುತ್ತಾರೆ. ಈ ವಯಸ್ಸಿಗೆ ಅವರಿಗೆ ತಮ್ಮ ಕಲ್ಪನೆಯ ಚಿತ್ರಗಳನ್ನು ಕುರಿತು ತಿಳಿಸುವ ಹುಮ್ಮಸ್ಸು ಮತ್ತು ಉತ್ಸಾಹ ಹೆಚ್ಚಿರುತ್ತದೆ. ಗೀಚಿದ ಚಿತ್ರಗಳೀಗ ಹೆಚ್ಚೆಚ್ಚು ಅರ್ಥಪೂರ್ಣ ಆಗಲಾರಂಭಿಸುತ್ತದೆ. 'ಅಮ್ಮನ ಕೈ ಹಿಡಿದುಕೊಂಡು ನಾನು ನಿಂತಿದ್ದೇನೆ, ಅಣ್ಣನೊಬ್ಬ ಗಾಳಿಪಟ ಹಾರಿಸುತ್ತಿದ್ದಾನೆ, ಕೆರೆಯಲ್ಲಿ ಮೀನುಗಳಿವೆ, ಇದು ಸೂರ್ಯ ಇದು ಚಂದ್ರ, ಇದು ಹೂವು..' ಹೀಗೆ ತಂತಾನೇ ಕಲ್ಪನೆ ಮಾಡಿಕೊಳ್ಳುತ್ತ ಹಲವು ಬಗೆಯ ಚಿತ್ರಗಳನ್ನು ಗೀಚಲಾರಂಭಿಸುತ್ತಾರೆ.

ಮಕ್ಕಳ ಕಲಿಕೆಗೆ ನಮ್ಮ ಪಾತ್ರ

ಅಡ್ಡಾದಿಡ್ಡಿಯಾಗಿ ಗೀಚಲಾರಂಭಿಸಿ, ಕ್ರಮೇಣ ಒಂದು ಬಿಂದುವಿನಿಂದ ಹೊರಟು ಕೈಯನ್ನು ಹೊರಳಿಸಿ ಅನಿರ್ದಿಷ್ಟವಾಗಿಯಾದರೂ ಸರಿ, ಒಂದು ವರ್ತುಲವನ್ನು ಬಿಡಿಸುವಲ್ಲಿ ಸಫಲಗೊಳ್ಳುವ ಮಕ್ಕಳ ಈ ಗೀಚುವಿಕೆಯೇ